ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-2 Issue 4, JAN-FEB 2021, 66-71**
**©*IIMRD*, Mysuru**

IIMRD JOURNALS

**www.iimrd.com**

# ಕಲಿಯೂರು ಗ್ರಾಮದ ವೀರಗಲ್ಲು ಶಾಸನಗಳು: ಒಂದು ಅವಲೋಕನ

**ಪ್ರಕಾಶ್.ಎಂ [1]**

**ಪೀಠಿಕೆ**

ತಿ. ನರಸೀಪರ ಎಂದು ಪರಿಚಿತವಾಗಿರುವ ತಿರುಮಕೂಡಲು ನರಸೀಪುರವು ದಕ್ಷಿಣ ಕರ್ನಾಟಕದ ತುದಿಯಲ್ಲಿರುವ ಮೈಸೂರು ಜಿಲ್ಲೆಯ ಒಂದು ತಾಲೂಕು ಕೇಂದ್ರವಾಗಿದೆ. ಈ ಪ್ರದೇಶವು ಪ್ರಾಚೀನ ಕಾಲದಿಂದಲೂ ತನ್ನದೇ ಆದ ಐತಿಹಾಸಿಕವಾದ ಮಹತ್ವವನ್ನು ಹೊಂದಿದ್ದು, ಕರ್ನಾಟಕವನ್ನು ಆಳಿದ ಹಲವಾರು ಪ್ರಾಚೀನ ಅರಸು ಮನೆತನಗಳ ಆಳ್ವಿಕೆಗೆ ಒಳಪಡುತ್ತಾ ಬಂದಿರುವುದು ಇತಿಹಾಸದ ಕುರುಹುಗಳಿಂದ ತಿಳಿಯುತ್ತದೆ. ಈ ಪ್ರದೇಶವು ಮೈಸೂರು ಜಿಲ್ಲೆಯ ಪೂರ್ವ ದಿಕ್ಕಿಗಿದೆ. ಈ ತಾಲೂಕಿನ ಹಲವಾರು ಹಳ್ಳಿಗಳು ಐತಿಹಾಸಿಕ ಮಹತ್ವದಿಂದ ಕೂಡಿ ತಾಲೂಕಿನ ಇತಿಹಾಸವನ್ನು ಶ್ರೀಮಂತಗೊಳಿಸಿದೆ. ಅಂತಹ ಗ್ರಾಮಗಳಲ್ಲಿ ಮುಖ್ಯವಾಗಿ ಕಲಿಯೂರು ಗ್ರಾಮವು ಒಂದು. ಈ ಕಲಿಯೂರು ಗ್ರಾಮವು ಕೂಡ ಪ್ರಾಚೀನ ಕಾಲದಿಂದಲೂ ಬಹಳ ಮಹತ್ವ ಪೂರ್ಣವಾದ ಐತಿಹಾಸಿಕ ಅವಶೇಷಗಳನ್ನೊಳಗೊಂಡು ತನ್ನ ಇತಿಹಾಸವನ್ನು ತಿಳಿಸುವಲ್ಲಿ ಮಹತ್ವಪೂರ್ಣವಾಗಿದೆ. ಅಂತಹ ಐತಿಹಾಸಿಕ ಕುರುಹುಗಳಲ್ಲಿ ಮುಖ್ಯವಾಗಿ ವೀರಗಲ್ಲುಗಳು, ಶಾಸನಗಳು, ಮಹಾಸತಿಗಲ್ಲುಗಳು ವಿವಿಧ ರೀತಿಯ ಶಿಲ್ಪಗಳು ಮುಖ್ಯವಾಗಿವೆ. ಇವುಗಳಲ್ಲಿ ಒಂದು ತಾಲೂಕು ಅಥವಾ ಒಂದು ಪ್ರದೇಶದ ಇತಿಹಾಸವನ್ನು ತಿಳಿಸುವಲ್ಲಿ ವೀರಗಲ್ಲು ಶಾಸನಗಳು ಮಹತ್ವಪೂರ್ಣವಾಗಿವೆ.

ಕನ್ನಡನಾಡಿನ ಇತಿಹಾಸದ ದೃಷ್ಟಿಯಿಂದ 10ನೇ ಶತಮಾನವು ವೀರಯುಗ ಎಂದು ಖ್ಯಾತಿ ಪಡೆದಿದೆ. ಆದ್ದರಿಂದಲೇ ಕನ್ನಡ ಸಾಹಿತ್ಯವು ವೀರಯುಗದಿಂದಲೇ ಆರಂಭಗೊಂಡು ವೀರರಸವನ್ನು ಸಹೃದಯರಿಗೆ ಯಥೇಚ್ಛವಾಗಿ ಕುಡಿಸುತ್ತದೆ. ಪ್ರಾಚೀನ ಸಮಾಜದಲ್ಲಿ ದಾನದಂತೆ ವೀರ ಅದರೊಂದಿಗೆ ಅವಿಭಾಜ್ಯ ಅಂಗವಾಗಿ ಬರುವ ತ್ಯಾಗ ಗುಣಗಳು ಮಹತ್ವ ಮೌಲ್ಯಗಳಾಗಿದ್ದವು. ಆದ್ದರಿಂದ ಪ್ರಾಚೀನ ಕಾಲದಲ್ಲಿ ವೀರರು ತಾವು ಇರುವ ಪ್ರದೇಶವನ್ನು ಕಾಪಾಡುವ ದೃಷ್ಟಿಯಿಂದ ಯುದ್ಧಗಳಲ್ಲಿ ಹೋರಾಡಿ ಮಡಿಯುತ್ತಿದ್ದರು. ಯುದ್ಧದಲ್ಲಿ ಗೆದ್ದರೆ ಇಹಲೋಕದಲ್ಲಿ ರಾಜ್ಯಲಕ್ಷ್ಮಿಯು,

---

[1] ***ಸಂಶೋಧಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು–570006***

ಹೋರಾಡುತ್ತ ಮಡಿದರೆ ಸ್ವರ್ಗದಲ್ಲಿ ಸುರಾಂಗನೆಯರು ದೊರಕುವುದರಿಂದ ಕ್ಷಣದಲ್ಲಿ ನಾಶವಾಗುವ ಈ ದೇಹತ್ಯಾಗ ಮರಣ ಬರುವುದೆಂದು ಏಕೆ ಚಿಂತೆ ಮಾಡಬೇಕು ಎಂದು ಅಂದಿನ ವೀರರುಗಳ ಮನಸ್ಸಿನಲ್ಲಿ ಬೇರೂರಿತ್ತು. ಆದುದರಿಂದ ರಾಜರುಗಳಿಗೆ ತಮ್ಮ ಸ್ವಾಮಿ ನಿಷ್ಠೆಯನ್ನು ವ್ಯಕ್ತಗೊಳಿಸುವಲ್ಲಿ ಊರಿಗೆ ಬಂದ ತೊಂದರೆಯನ್ನು ನಿವಾರಿಸುವಲ್ಲಿ ಮೊರೆ ಒಕ್ಕುವವರನ್ನು ರಕ್ಷಿಸುವಲ್ಲಿ ಸ್ತ್ರೀಯರ ಮಾನವನ್ನು ಕಾಪಾಡುವಲ್ಲಿ ದುಷ್ಟ ದುಜ್ಜನರನ್ನು ಬಗ್ಗಿ ಬಡಿಯುವುದರಲ್ಲಿ ಪ್ರಾಚೀನ ವೀರರಾಗಿದ್ದ ಕನ್ನಡಿಗರು ತಮ್ಮ ಪ್ರಾಣವನ್ನು ಆವೃತಿಯಾಗಿಸಿ ಹೋರಾಡಿದ್ದಾರೆ. ಅಂತಹವರ ಕಥೆಯನ್ನು ಸಾರುತ ಅವರ ಸ್ಮರಣೆಯನ್ನು ಪ್ರಸ್ತುತ ಕಾಲದ ಮನದಲ್ಲಿ ಎಚ್ಚರಿಸುತ್ತ ನಾಡಿನ ಉದ್ದಗಲಕ್ಕೂ ವೀರ ವೀರಗಲ್ಲು ಶಾಸನಗಳು ನಿಂತುಕೊಂಡಿವೆ. ದಾನ ಶಾಸನಗಳ ನಂತರದಲ್ಲಿ ಸಂಖ್ಯಾ ದೃಷ್ಟಿಯಿಂದ ವಿಫುಲವಾಗಿ ಸಿಗುವ ಶಾಸನಗಳೆಂದರೆ ಈ ವೀರಗಲ್ಲು ಶಾಸನಗಳೇ ಆಗಿವೆ.

ಈ ವೀರಗಲ್ಲು ಶಾಸನಗಳಿಂದ ಒಂದು ಪ್ರದೇಶದ ಇತಿಹಾಸ ತಿಳಿಯುವಲ್ಲಿ ಬಹಳ ಪ್ರಮುಖ ಪಾತ್ರವಹಿಸುತ್ತವೆ. ಅಂತಹ ಪ್ರದೇಶಗಳಲ್ಲಿ ತಿ.ನರಸೀಪುರ ತಾಲೂಕಿನ ಕಲಿಯೂರು ಗ್ರಾಮವು ಒಂದು. ಕಲಿಯೂರು ಗ್ರಾಮವು ತಿ.ನರಸೀಪುರ ತಾಲೂಕು ಪ್ರದೇಶದಿಂದ ಪೂರ್ವ ದಿಕ್ಕಿಗೆ ಸುಮಾರು 10 ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ಪ್ರಾಚೀನ ಕಾಲದಿಂದ ಐತಿಹಾಸಿಕವಾಗಿ ಮಹತ್ವದಿಂದ ಕೂಡಿದೆ. ಈ ಗ್ರಾಮವನ್ನು ಶಾಸನಗಳಲ್ಲಿ ಅಂದರೆ ಕಲಿಯೂರಿನ ಕ್ರಿ.ಶ.1006ರ ಶಾಸನ 'ಕಲಊರು' ಹಾಗೂ ಕ್ರಿ.ಶ.1521ರ ಶಾಸನ ಹಾಗೂ ಕ್ರಿ.ಶ.16–17ನೇ ಶತಮಾನದ ಶಾಸನವು ಕೃಷ್ಣಾಪುರ ಮತ್ತು ಕೃಷ್ಣರಾಯಪುರವೆಂದು ಉಲ್ಲೇಖಿಸಿದೆ. ಕಲಿಯೂರಿನಲ್ಲಿ ಈ ಗ್ರಾಮದಲ್ಲಿ ಚೋಳರಿಗೂ ಮತ್ತು ಚಾಲುಕ್ಯರ ಸಾಮಂತರಾಗಿದ್ದ ಹೊಯ್ಸಳರಿಗೂ ಗಂಗರಿಗೂ ಹಾಗೂ ನೊಳಂಬರಿಗೂ ಪ್ರಾಚೀನ ಕಾಲದಲ್ಲಿ ಯುದ್ಧ ಸಂಭವಿಸಿದ ಸ್ಥಳವು ಕೂಡ ಇದು. ಈ ಗ್ರಾಮದಲ್ಲಿ ಮುಖ್ಯವಾಗಿ ಮೂರು ವೀರಗಲ್ಲು ಶಾಸನವಿದ್ದು ಅವುಗಳು ಆ ಪ್ರದೇಶದ ಇತಿಹಾಸವನ್ನು ಒದಗಿಸುತ್ತವೆ. ಅಂತಹ ವೀರರ ಕಲ್ಲುಗಳಲ್ಲಿ ಮೂರು ವೀರಗಲ್ಲುಗಳು ಪ್ರಮುಖವಾಗಿವೆ. ಈ ಮೂರು ವೀರಗಲ್ಲುಗಳು ಗ್ರಾಮದ ಮಾರಿಗುಡಿಯ ಪಕ್ಕದಲ್ಲಿವೆ.

**ಮಾರಿಗುಡಿಯ ಮುಂದಿರುವ ವೀರಗಲ್ಲು ಶಾಸನ : ಒಂದು**

ಈ ವೀರಗಲ್ಲು ಕಲಿಯೂರು ಗ್ರಾಮದದಲ್ಲಿರುವ ಮಾರಮ್ಮನ ದೇವಾಲಯದ ಮುಂಭಾಗದಲ್ಲಿ ದಕ್ಷಿಣಾಭಿಮುಖವಾಗಿ ಇದೆ. ಈ ವೀರಗಲ್ಲು ಸುಮಾರು 3 ಅಡಿ ಎತ್ತರ, 2½ ಅಡಿ ಅಗಲ, 5 ಇಂಚು ದಪ್ಪವಾಗಿದ್ದು ಗ್ರಾನೈಟ್ ಶಿಲೆಯಲ್ಲಿ ಕೆತ್ತಲಾಗಿದ್ದು 3 ಪಟ್ಟಿಕೆಯಿಂದ ಕೂಡಿದೆ. ಕೆಳಭಾಗದಲ್ಲಿ ವೀರನು ಖಡ್ಗವನ್ನು ಹಿಡಿದು ಹೋರಾಡುತ್ತಿರುವ ದೃಶ್ಯ. ಎರಡನೇ ಪಟ್ಟಿಕೆಯಲ್ಲಿ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವ ದೃಶ್ಯ, ಮೂರನೇ ಪಟ್ಟಿಕೆಯಲ್ಲಿ ವೀರನನ್ನು

ಸ್ವರ್ಗಸ್ತನಾಗಿ ಮಾಡುತ್ತಿರುವ ದೃಶ್ಯವಿದೆ. ಈ ಮೂರು ಮಧ್ಯ ಪಟ್ಟಿಕೆಯಲ್ಲಿ ಶಾಸನ ಬರೆಯಲಾಗಿದ್ದು ಈ ಶಾಸನವು ಕ್ರಿ.ಶ.1241ರಲ್ಲಿ ಕೆತ್ತಲಾಗಿದೆ.

ಸಂವ್ವಾರಿ ಸಂವತ್ಸರದ ಮಾಘ ಬಹುಳ ಒಂದರಲ್ಲಿ ಶಾಸನವು ಹೊರಟಿದ್ದು ರಣಭಯಂಕರ ಮಾರೋಜಾನ ವೀರಗಲ್ಲು ಎಂದು ಉಲ್ಲೇಖಿಸಿದ. ಆದರೆ ಈ ಮಾರೋಜಾ ಯಾರು? ಯಾವ ಕಾರಣಕ್ಕೆ ಮಡಿದ ಎಂಬ ಸವಿವರವಾದ ವಿವರವನ್ನು ತಿಳಿಸಿಲ್ಲ.

**ಮಾರಿಗುಡಿಯ ಮುಂದಿರುವ ವೀರಗಲ್ಲು ಶಾಸನ : ಎರಡು**

ಅದೇ ಸ್ಥಳದಲ್ಲಿರುವ ಮತ್ತೊಂದು ವೀರಗಲ್ಲು ಶಾಸನವು ಕ್ರಿ.ಶ.1181ರಲ್ಲಿ ಹೊರಟಿದ್ದು ಈ ಶಾಸನವು ಕೀಲಾರ ಸಂವತ್ಸರದ ಪಲ್ಲವ ಸಂವತ್ಸರದ ಆಶ್ವಯಿಜ ಬಹುಳ ಎರಡರಲ್ಲಿ ಹೊರಟಿದ್ದು ಆ ಪ್ರಾಂತ್ಯದ ಬಲ್ಲಾಳನನ್ನು ಮಾಲಂಗಿಯ ಮಾವಿನಹಳ್ಳಿಯ ಹುಲಿಯೊಡನೆ ಕಾದಾಡಿ ಮಡಿದನೆಂದು ಶಾಸನವು ತಿಳಿಸುತ್ತದೆ. ಈ ವೀರಗಲ್ಲು ಸುಮಾರು 3 ಅಡಿ ಎತ್ತರ, 2½ ಅಡಿ ಅಗಲ, 5 ಇಂಚು ದಪ್ಪವಾಗಿದೆ. ಈ ವೀರಗಲ್ಲು ಕೂಡ ಮೂರು ಪಟ್ಟಿಕೆಗಳಿಂದ ಕೂಡಿದ್ದು ಕೆಳಭಾಗದಲ್ಲಿ ವೀರನು ಹೋರಾಡುತ್ತಿರುವ ದೃಶ್ಯ, ಎರಡನೇ ಪಟ್ಟಿಕೆಯಲ್ಲಿ ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವ ದೃಶ್ಯ. ಮೂರನೇ ಪಟ್ಟಿಕೆಯಲ್ಲಿ ವೀರನನ್ನು ಶಿವಲಿಂಗಕ್ಕೆ ಸಮರ್ಪಿಸಿ ಸ್ವರ್ಗಸ್ಥರನ್ನಾಗಿ ಮಾಡುತ್ತಿರುವ ದೃಶ್ಯವಿದೆ. ವೀರಗಲ್ಲಿನ ಮೇಲ್ಭಾಗದಲ್ಲಿ ಸೂರ್ಯಚಂದ್ರರನ್ನು ಕೆತ್ತಲಾಗಿದೆ.

**ಮಾರಿಗುಡಿಯ ಮುಂದಿರುವ ವೀರಗಲ್ಲು ಶಾಸನ : ಮೂರು**

ಅದೇ ಸ್ಥಳದಲ್ಲಿರುವ ಮೂರನೇ ವೀರಗಲ್ಲು ಶಾಸನವು ಸಂವ್ಮಾರಿ ಸಂವತ್ಸರದ ಮಾಘ ಬಹುಳ ಒಂದರಲ್ಲಿ ಹೊರಟಿದೆ. ಈ ಶಾಸನವು *ಅಲ್ಲೋಜನಾ ವೀರಗಲ್ಲು* ಎಂದು ಉಲ್ಲೇಖಿಸುತ್ತದೆ. ಆದರೆ ಈ ಅಲ್ಲೋಜನಾ ಯಾರು, ಯಾವ ಉದ್ದೇಶಕ್ಕೆ ಮಡಿದ ಎಂಬ ವಿವರವನ್ನು ತಿಳಿಸುವಲ್ಲಿ ವೀರಗಲ್ಲು ಪ್ರಸ್ತುತ ಸಂಪೂರ್ಣವಾಗಿ ತೃಟಿತಗೊಂಡಿದ್ದು ಈ ಶಾಸನವು ಕೂಡ ಮೂರು ಪಟ್ಟಿಕೆಗಳನ್ನು ಒಳಗೊಂಡಿದೆ. ಮೊದಲ ಪಟ್ಟಿಕೆಯು ಭೂಮಿಯಲ್ಲಿ ಊತುಹೋಗಿದೆ. ಎರಡನೇ ಪಟ್ಟಿಕೆಯಲ್ಲಿ ಶಿವಲಿಂಗ ಮತ್ತು ನಂದಿಯ ಉಬ್ಬುಶಿಲ್ಪವಿದ್ದು ವೀರರನ್ನು ಸ್ವರ್ಗಸ್ತವಾಗಿ ಮಾಡಲಾಗುತ್ತದೆ. ಪ್ರಸ್ತುತ ಮೂರನೇ ಪಟ್ಟಿಕೆಯು ತೃಟಿಗೊಂಡಿದೆ. ಈ ವೀರಗಲ್ಲು 2 ಅಡಿ ಉದ್ದ, 2 ಅಡಿ ಅಗಲ, 2 ಇಂಚು ದಪ್ಪವಾಗಿದೆ.

ಈ ರೀತಿಯಾಗಿ ವೀರಗಲ್ಲು ಶಾಸನಗಳು ಒಂದು ಪ್ರದೇಶದ ಇತಿಹಾಸವನ್ನು ತಿಳಿಸುವಲ್ಲಿ ಮಹತ್ವಪೂರ್ಣವಾಗಿದೆ. ಒಟ್ಟಾರೆಯಾಗಿ ವೀರಗಲ್ಲು ಶಾಸನಗಳಿಂದ ಇತಿಹಾಸಕ್ಕೆ ಸಾಮಾಜಿಕವಾಗಿ,

ಸಾಹಿತ್ಯಾತ್ಮಕವಾಗಿ, ಕಲಾತ್ಮಕವಾಗಿ ಒಂದು ಪ್ರದೇಶದ ಸಂಸ್ಕೃತಿಯನ್ನು ಬಿಂಬಿಸುವ ಕುರುಹುಗಳಾಗಿ ನಿಂತಿವೆ.


**ಪರಾಮರ್ಶನ ಗ್ರಂಥಗಳು**


- ಅಂಬಳಿಕೆ ಹಿರಿಯಣ್ಣ. (2009). ಕನ್ನಡ ವಿಷಯ ವಿಶ್ವಕೋಶ. ಇತಿಹಾಸ ಮತ್ತು ಪುರಾತತ್ವ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
- ಹಾ.ಮಾ. ನಾಯಕ್. (ಸಂ.) (1976). ಎಪಿಗ್ರಾಫಿಯಾ ಕರ್ನಾಟಿಕ, ಸಂ. 5, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
- ಹಿರೇಮಠ ಎಸ್.ಎಂ.. (1998). ಶಾಸನ ಅಧ್ಯಯನ.
- ರಾಜೇಂದ್ರಪ್ಪ ಎಸ್.ಆರ್. (2010). ತಿರುಮಕೂಡಲು ನರಸೀಪುರ ಗ್ಯಾಜೆಟಿಯರ್, ಕರ್ನಾಟಕ ಸರ್ಕಾರ, ಬೆಂಗಳೂರು.


**ಛಾಯಾಚಿತ್ರಗಳು**



ಶಾಸನೋಕ್ತ ವೀರಗಲ್ಲು: ಒಂದು



ಶಾಸನೋಕ್ತ ವೀರಗಲ್ಲು : ಎರಡು




ಶಾಸನ: ಮೂರು



ಮಾಸ್ತಿಕಲ್ಲು




ಮೊದಲನೇ ರಾವಣನ ಶಿಲ್ಪ



ಎರಡನೆ ರಾವಣ ಶಿಲ್ಪ



ವೀರನ ಶಿಲ್ಪ



ವೀರಳ ಶಿಲ್ಪ

IIMRD JOURNALS